**ಕರ್ನಾಟಕ ಸರ್ಕಾರ**

ಜಿಲ್ಲಾಧಿಕಾರಿಗಳ ಕಾರ್ಯಾಲಯ ರಾಯಚೂರು

---

ಸಂಖ್ಯೆ : ಕಂದಾಯ/ಸಿಬ್ಬಂದಿ/1/247/ಗ್ರಾ.ಲೆ/ನೇ/ನೇಮಕಾತಿ/2008-09 ದಿನಾಂಕ: 18 -01-2010

# ಅಧಿಸೂಚನೆ

**ವಿಷಯ:** ರಾಯಚೂರು ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಾಧಿಕಾರಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಕುರಿತು.

**ಉಲ್ಲೇಖ:** 1) ಸರಕಾರದ ಅಧಿಸೂಚನೆ ಸಂಖ್ಯೆ/ಆರ್‌ಡಿ/299/ಬಿಎಸ್‌ಪಿ/2006 ದಿನಾಂಕ: 03-02-2009.

2) ಈ ಕಾರ್ಯಾಲಯದ ಅಧಿಸೂಚನೆ ಸಂ.ದಿ: 26-09-2009.

3) ಈ ಕಾರ್ಯಾಲಯದ ಪತ್ರ ದಿ: 30-11-2009.

4) ಈ ಕಾರ್ಯಾಲಯದ ಪತ್ರ ದಿ: 01-01-2010.

5) ಈ ಕಾರ್ಯಾಲಯದ ಪತ್ರ ದಿ: 02-01-2010.

6) ಈ ಕಾರ್ಯಾಲಯದ ಅಧಿಸೂಚನೆ ದಿ: 12-01-2010.

***

ರಾಯಚೂರು ಜಿಲ್ಲೆಯ ಕಂದಾಯ ಇಲಾಖೆಯಲ್ಲಿ (62) ಗ್ರಾಮ ಲೆಕ್ಕಾಧಿಕಾರಿಗಳ ನೇರ ನೇಮಕಾತಿ ಕುರಿತು ಉಲ್ಲೇಖ (3)ರಲ್ಲಿಯ ಈ ಕಛೇರಿ ಪತ್ರದ ಮೂಲಕ ಆಕ್ಷೇಪಣೆಗಳನ್ನು ಆಹ್ವಾನಿಸಿ ಪರಿಶೀಲನಾ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಪ್ರಕಟಿತ ಪರಿಶೀಲನಾ ಪಟ್ಟಿಗೆ ದಿನಾಂಕ: 30-11-2009 ರಿಂದ 14-12-2009ರ ವರೆಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದ್ದು, ಸದರಿ ಅವಧಿಯಲ್ಲಿ ಸ್ವೀಕೃತಗೊಂಡ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗಿದೆ. ದಿನಾಂಕ: 01-01-2010ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಆದರೆ ಸದರಿ ಪಟ್ಟಿಯಲ್ಲಿ ತಾಂತ್ರಿಕ ದೋಷಗಳಿಂದಾಗಿ ಕೆಲವೊಂದು ತಪ್ಪುಗಳು ಆಗಿದ್ದರಿಂದ ಅದನ್ನು ಅಂದೇ ಹಿಂದಕ್ಕೆ ಪಡೆದು ಪುನಃ ದಿನಾಂಕ: 02-01-2010 ರಂದು ಪರಿಷ್ಕೃತ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸುತ್ತಾ ದಿನಾಂಕ: 11-01-2010 ರವರೆಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಅಭ್ಯರ್ಥಿಗಳಿಗೆ ಕಾಲಾವಕಾಶ ನೀಡಲಾಯಿತು. ದಿನಾಂಕ: 02-01-2010 ರಿಂದ 11-01-2010 ರ ವರೆಗೆ ಸ್ವೀಕೃತವಾದ ಒಟ್ಟು 23 ಅರ್ಜಿಗಳನ್ನು ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮ ಜರುಗಿಸಿ ದಿನಾಂಕ: 12-01-2010 ರಂದು ಉದ್ದೇಶಿತ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸುತ್ತಾ ಸದರಿ ಪಟ್ಟಿಯನ್ನು ಪರಿಶೀಲಿಸಿ ಆಕ್ಷೇಪಣೆಯನ್ನು ಸಲ್ಲಿಸಲು ಅಭ್ಯರ್ಥಿಗಳಿಗೆ ಅಂತಿಮವಾಗಿ ದಿನಾಂಕ: 16-01-2010ರ ಸಂಜೆ 5.00 ಗಂಟೆವರೆಗೆ ಕಾಲಾವಕಾಶ ನೀಡಲಾಗಿತ್ತು. ಈ ಅವಧಿಯಲ್ಲಿ ಒಟ್ಟು (09) ಅರ್ಜಿಗಳು ಸ್ವೀಕೃತವಾಗಿದ್ದು ಅವುಗಳನ್ನು ಪರಿಶೀಲಿಸಿ ಅಭ್ಯಥಿಗಳಿಗೆ ಸೂಕ್ತ ಹಿಂಬರಹ ನೀಡಲಾಗಿದೆ. ಅಭ್ಯರ್ಥಿಗಳ ಅರ್ಹತೆ ಆಧಾರದ ಮೇಲೆ ವರ್ಗವಾರು ಅಂತಿಮ ನೇಮಕಾತಿ ಪಟ್ಟಿಯನ್ನು ಮೂಲ ದಾಖಲೆಗಳನ್ನು ಹಾಜರಪಡಿಸುವ ಷರತ್ತುಗೊಳಪಟ್ಟು ಪ್ರಕಟಿಸಲಾಗಿದೆ.

ಮಾಜಿ ಸೈನಿಕರ ಕೋಟಾದಡಿಯಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿರುವುದರಿಂದ ಮಾಜಿ ಸೈನಿಕರಾಗಿ ಕಾಯ್ದಿರಿಸಿದ (06) ಹುದ್ದೆಗಳಲ್ಲಿ (05) ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿರುವುದಿಲ್ಲ. ಅಭ್ಯರ್ಥಿಗಳ ಈ ಕೆಳಗಿನ ದಾಖಲೆಗಳು ಜಿಲ್ಲಾಧಿಕಾರಿಗಳ ಕಛೇರಿಗೆ ತಲುಪಿದ ನಂತರ ನೇಮಕಾತಿ ಆದೇಶವನ್ನು ನೀಡಲಾಗುವುದು

1) ಸಿಂಧುತ್ವ ಪ್ರಮಾಣ ಪತ್ರ.
2) ಪೋಲೀಸ್ ಇಲಾಖೆಯ ಪರಿಶೀಲನಾ ಪ್ರಮಾಣ ಪತ್ರ.
3) ವೈದ್ಯಕೀಯ ಪ್ರಮಾಣ ಪತ್ರ.

ಸಾಮಾನ್ಯ ಅಭ್ಯರ್ಥಿಗಳು (GM) ದಿನಾಂಕ : 27-01-2010 ರಂದು ಹಾಗೂ ಇತರೆ ಎಲ್ಲಾ ಮೀಸಲಾತಿ ವರ್ಗಗಳ (ಪ.ಜಾ/ಪ.ಪಂ/ಪ್ರವರ್ಗ 1/ ಪ್ರವರ್ಗ-2ಎ/ಪ್ರವರ್ಗ-2ಬಿ/ಪ್ರವರ್ಗ-3ಎ/ಪ್ರವರ್ಗ-3ಬಿ) ಅಭ್ಯರ್ಥಿಗಳು ದಿನಾಂಕ: 28-01-2010ರಂದು ಬೆಳಿಗ್ಗೆ 10:00 ಗಂಟೆಗೆ ಜಿಲ್ಲಾ ಸಾರ್ವಜನಿಕ ಆಸ್ಪತ್ರೆ ರಾಯಚೂರುನಲ್ಲಿ ವೈದ್ಯಕೀಯ ತಪಾಸಣೆಗಾಗಿ ತಪ್ಪದೇ ಹಾಜರಾಗತಕ್ಕದ್ದು.

ನೇಮಕಾತಿಯ ಅಂತಿಮ ತೀರ್ಮಾನವು ಆಯ್ಕೆ ಪ್ರಾಧಿಕಾರಕ್ಕೆ ಒಳಪಟ್ಟಿರುತ್ತದೆ. ಆಯ್ಕೆ ಪಟ್ಟಿಯಲ್ಲಿ ಹೆಸರು ನಮೂದಿಸಿದ ಮಾತ್ರಕ್ಕೆ ನೇಮಕಾತಿ ಆಗಿದೆಯೆಂದು ಹಕ್ಕನ್ನು ಸಾಧಿಸುವಂತಿಲ್ಲ. ಈ ಅಂತಿಮ ಆಯ್ಕೆ ಪಟ್ಟಿಯ ಜೊತೆಗೆ ಕಾಯ್ದಿರಿಸಿದ ಅಭ್ಯರ್ಥಿಗಳ ಪಟ್ಟಿಯನ್ನು ಸಹ ಪ್ರಕಟಿಸಲಾಗಿದೆ. ಅಂತಿಮ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳು ನೇಮಕಾತಿ ಆದೇಶ ಪಡೆದನಂತರ ನಿಗದಿತ ಅವಧಿಯಲ್ಲಿ ಕೆಲಸಕ್ಕೆ ಹಾಜರಾಗದಿದ್ದಲ್ಲಿ ಅವರ ಬದಲಾಗಿ ಕಾಯ್ದಿರಿಸಿದ ಪಟ್ಟಿಯಲ್ಲಿನ ಅರ್ಹ ಅಭ್ಯರ್ಥಿಗಳಿಗೆ ನಿಯಮಾನುಸಾರ ನೇಮಕಾತಿ ಆದೇಶವನ್ನು ನೀಡಲಾಗುವುದು.

ಗ್ರಾಮ ಲೆಕ್ಕಾಧಿಕಾರಿಗಳ ನೇರ ನೇಮಕಾತಿ ಪಟ್ಟಿಯನ್ನು ವೆಬ್ ಸೈಟ್ ವಿಳಾಸ htt://www.raichur.nic.in ನಲ್ಲಿ ಅಭ್ಯರ್ಥಿಗಳ ಗಮನಕ್ಕೆ ಪ್ರಕಟಿಸಲಾಗಿದೆ.

**ಅಧ್ಯಕ್ಷರು,**
ಆಯ್ಕೆ ಪ್ರಾಧಿಕಾರ ಹಾಗೂ
ಜಿಲ್ಲಾಧಿಕಾರಿಗಳು ರಾಯಚೂರು

**ಪ್ರತಿಯನ್ನು ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.**

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಬಹುಮಹಡಿಗಳ ಕಟ್ಟಡ ಬೆಂಗಳೂರು.
2) ಮಾನ್ಯ ಪ್ರಾದೇಶಿಕ ಆಯುಕ್ತರು ಗುಲಬರ್ಗಾ ವಿಭಾಗ ಗುಲಬರ್ಗಾ.

**ಪ್ರತಿಯನ್ನು:**

1) ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ ಸರ್ಕಾರಿ ಹೊರವಾಲಯ ಮುಂದ್ರಣಾಲಯ 8ನೇ ಮೈಲಿ ಮೈಸೂರು ರಸ್ತೆ ಆರ್.ವಿ.ಕಾಲೇಜು ಪೋಸ್ಟ್/ ಬೆಂಗಳೂರು-58 ಇವರಿಗೆ ಈ ಅಧಿಸೂಚನೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಹಾಗೂ ಪ್ರಕಟಿತ ಅಧಿಸೂಚನೆ ಪ್ರತಿಯನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.
2) ಸಹಾಯಕ ಆಯುಕ್ತರು, ರಾಯಚೂರು/ಲಿಂಗಸುಗೂರು ರವರಿಗೆ ಅಧಿಸೂಚನೆ ಪ್ರತಿಯನ್ನು ಕಳುಹಿಸಿಕೊಡಲಾಗಿದೆ. ಸದರಿ ಅಧಿಸೂಚನೆಯನ್ನು ಕಛೇರಿಯ ಸೂಚನಾ ಫಲಕಕ್ಕೆ ಪ್ರಕಟಿಸಿ ವರದಿ ಸಲ್ಲಸಲು ಸೂಚಿಸಿದೆ.
3) ಜಿಲ್ಲೆಯ ಎಲ್ಲಾ ತಹಸೀಲ್ದಾರರಿಗೆ ಅಧಿಸೂಚನೆ ಪ್ರತಿಯನ್ನು ಕಳುಹಿಸಿಕೊಡಲಾಗಿದೆ. ಸದರಿ ಅಧಿಸೂಚನೆಯನ್ನು ಕಛೇರಿಯ ಸೂಚನಾ ಫಲಕಕ್ಕೆ ಪ್ರಕಟಿಸಿ ವರದಿ ಸಲ್ಲಿಸಲು ಸೂಚಿಸಿದೆ.
4) ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ರಾಯಚೂರು ರವರಿಗೆ ಅಧಿಸೂಚನೆಯನ್ನು ದಿನಪತ್ರಿಕೆಯಲ್ಲಿ ಸುದ್ದಿ ರೂಪದಲ್ಲಿ ಪ್ರಕಟಿಸಲು ಕೋರಲಾಗಿದೆ.
5) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ರಾಯಚೂರು ಇವರಿಗೆ.
6) ರಾಷ್ಟ್ರೀಯ ಸೂಕನಾ ವಿಜ್ಞಾನ ಕೇಂದ್ರದ ಅಧಿಕಾರಿಗಳು, (NIC) ರಾಯಚೂರು ಇವರಿಗೆ ಅಧಿಸೂಚನಾ ಮಾಹಿತಿಯನ್ನು ವೆಬ್ ಸೈಟ್ ನಲ್ಲಿ ಬಿತ್ತರಿಸಲು ಕೋರಲಾಗಿದೆ.
7) ಕಛೇರಿ ಕಡತಕ್ಕೆ.